# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಎಸ್.ಸಿ. ನಂ. 4/2021

**ಫಿರ್ಯಾದುದಾರರುಃ** **ಸರ್ಕಾರದ ಪರವಾಗಿ, ಮುಂಡರಗಿ ಪೋಲೀಸ್ ಠಾಣೆ.**

**- ವಿರುದ್ಧ -**

**ಆರೋಪಿತರುಃ**

1. ಅನಿಲ್ ತಂದೆ ಪರ್ವತಗೌಡ ಪಾಟೀಲ,
   ವಯಾಃ 24 ವರ್ಷ, ಉದ್ಯೋಗಃ ಚಾಲಕ,
   ಸಾಃ ಅತ್ತಿಕಟ್ಟಿ ಹಾಲಿ ಬೆಟಗೇರಿ ಗೌರಿ ಗುಡಿಯ ಹತ್ತಿರ
2. ಶಶಿಧರ ತಂದೆ ಮಹಲಿಂಗಪ್ಪ ಕವಳಿಕಾಯಿ ಉರ್ಫ ಮ್ಯಾಗೇರಿ,
   ವಯಾಃ33 ವರ್ಷ, ಉದ್ಯೋಗಃ ಕೂಲಿ,
   ಸಾಃ ನರಗೇಲ್ ಹಾಲಿಃ ಬೆಟಗೇರಿ ಗೌರಿ ಗುಡಿಯ ಹತ್ತಿರ
3. ಸಿದ್ದು ಉರ್ಫ ಸಿದ್ದೇಶ ತಂದೆ ಶ್ರೀಶೈಲ ಕವಳಿಕಾಯಿ,
   ವಯಾಃ 22 ವರ್ಷ, ಉದ್ಯೋಗಃ ಒಕ್ಕಲುತನ,
   ಸಾಃ ಬೆಟಗೇರಿ ಗೌರಿಗುಡಿಯ ಹತ್ತಿರ
4. ಬಸವರಾಜ ತಂದೆ ಕಳಕಪ್ಪ ಕವಳಿಕಾಯಿ,
   ವಯಾಃ 59 ವರ್ಷ, ಉದ್ಯೋಗಃ ಚಾಲಕ,
   ಸಾಃ ಬೆಟಗೇರಿ ಗೌರಿಗುಡಿಯ ಹತ್ತಿರ
5. ವಿಷ್ಣು ತಂದೆ ಸಂಗಪ್ಪ ಪಟ್ಟೇದ,
   ವಯಾಃ 23 ವರ್ಷ ಉದ್ಯೋಗಃ ಒಕ್ಕಲುತನ,
   ಸಾಃ ಬೆಟಗೇರಿ ಗೌರಿಗುಡಿಯ ಹತ್ತಿರ
6. ಕೆಂಚನಗೌಡ ತಂದೆ ನಾಗನಗೌಡ ಪಾಟೀಲ,
   ವಯಾಃ 58 ವರ್ಷ, ಉದ್ಯೋಗಃ ಒಕ್ಕಲುತನ,
   ಸಾಃ ಅತ್ತಿಕಟ್ಟಿ ತಾಃ ಮುಂಡರಗಿ

7. ಸಹದೇವಗೌಡ ತಂದೆ ನಾಗನಗೌಡ ಪಾಟೀಲ,
ವಯಾಃ 68 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ಅತ್ತಿಕಟ್ಟಿ ತಾಃ ಮುಂಡರಗಿ

8. ಶಂಕ್ರಗೌಡ ತಂದೆ ಸಹದೇವಗೌಡ ಪಾಟೀಲ,
ವಯಾಃ 30 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ಅತ್ತಿಕಟ್ಟಿ ತಾಃ ಮುಂಡರಗಿ

9. ಸುಶೀಲವ್ವ ಕೋಂ ಸಹದೇವಗೌಡ ಪಾಟೀಲ,
ವಯಾಃ 55 ವರ್ಷ, ಉದ್ಯೋಗಃ ಮನೆಗೆಲಸ,
ಸಾಃ ಅತ್ತಿಕಟ್ಟಿ ತಾಃ ಮುಂಡರಗಿ

10. ಜಯಮ್ಮ ಉರ್ಫ ಜಯಶ್ರೀ ತಂದೆ ಕೆಂಚನಗೌಡ ಪಾಟೀಲ,
ವಯಾಃ 50 ವರ್ಷ, ಉದ್ಯೋಗಃ ಮನೆಗೆಲಸ,
ಸಾಃ ಅತ್ತಿಕಟ್ಟಿ , ತಾಃ ಮುಂಡರಗಿ

11. ಮುತ್ತಪ್ಪ ಉರ್ಫ ಕಳಕಪ್ಪ ತಂದೆ ಶ್ರೀಶೈಲಪ್ಪ ಕವಳಿಕಾಯಿ,
ವಯಾಃ 30 ವರ್ಷ, ಉದ್ಯೋಗಃ ವೈರಿಂಗ ಕೆಲಸ,
ಸಾಃ ಬೆಟಗೇರಿ, ತಾಃ ಗದಗ

12. ಮಲ್ಲಿಕಾರ್ಜುನ @ ಮಲ್ಲಿಕಾರ್ಜುನಪ್ಪ ತಂದೆ ಕಳಕಪ್ಪ ಕವಳಿಕಾಯಿ,
ವಯಾಃ 65 ವರ್ಷ, ಉದ್ಯೋಗಃ ಚಾಲಕರು,
ಸಾಃ ಬೆಟಗೇರಿ, ತಾಃ ಗದಗ

13. ಲಲಿತವ್ವ ಕೋಂ ಪರ್ವತಗೌಡ ಪಾಟೀಲ,
ವಯಾಃ 55 ವರ್ಷ, ಉದ್ಯೋಗಃ ಮನೆಗೆಲಸ,
ಸಾಃ ಅತ್ತಿಕಟ್ಟಿ ತಾಃ ಮುಂಡರಗಿ

## :ದೋಷಾರೋಪಣೆ:

ನಾನು, **ಶ್ರೀ ಬಸವರಾಜ, ಬಿ.ಕಾಂ., ಎಲ್.ಎಲ್.ಎಂ.** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆ,

ಮಂಡರಗಿ ಪೋಲೀಸ್ ಠಾಣೆ ಹದ್ದಿಯ ಪೈಕಿ, ಅತ್ತಿಕಟ್ಟಿ ಗ್ರಾಮದಲ್ಲಿ ಫಿರ್ಯಾದಿ ಮಲ್ಲನಗೌಡ ಹಾಗೂ 1 ರಿಂದ 13 ನೇ ಆರೋಪಿಗಳಾದ ನೀವು ಸಂಬಂಧಿಕರು ಇದ್ದು ಜಮೀನಿನ ಹಂಚಿಕೆಯ ವಿಷಯವಾಗಿ ಆಗಾಗ ತಂಟೆ ತಕರಾರು ಮಾಡುತ್ತಾ ಬಂದಿದ್ದು, ದಿಃ 05.03.2020 ರಂದು ಆರೋಪಿತರಾದ ನೀವು ಚಾಸಾ-6 ಗಂಗನಗೌಡನಿಗೆ ಹೊಡೆ ಬಡೆ ಮಾಡಿದ್ದರಿಂದ ಸದರಿ ಚಾಸಾ-6 ಗಂಗನಗೌಡ ನಿಮ್ಮ ಮೇಲೆ ಮುಂಡರಗಿ ಪೋಲೀಸ ಠಾಣೆಯಲ್ಲಿ ದೂರನ್ನು ಕೊಟ್ಟಿದ್ದರಿಂದ ಸಿಟ್ಟಾಗಿ ದಿಃ 06.03.2020 ರಂದು ಮದ್ಯಾಹ್ನ 02.00 ಗಂಟೆಯ ಸುಮಾರಿಗೆ ಫಿರ್ಯಾದಿ ಮಲ್ಲನಗೌಡ ಇವರ ಸಹೋದರ ಚಾಸಾ-8 ಹನಮಂತಗೌಡ ಇವರ ಮನೆಯ ಮುಂದೆ ಇರುವ ಬಯಲು ಜಾಗೆಯಲ್ಲಿ ಫಿರ್ಯಾದಿ ಮಲ್ಲನಗೌಡ ಹಾಗೂ ಚಾಸಾ-6 ಗಂಗನಗೌಡ, ಚಾಸಾ-7 ರುದ್ರಗೌಡ ಮತ್ತು ಚಾಸಾ-8 ಹನಮಂತಗೌಡ ಇವರು ಮಾತನಾಡುತ್ತಾ ನಿಂತುಕೊಂಡಿದ್ದಾಗ, 1 ರಿಂದ 13 ನೇ ಆರೋಪಿತರಾದ ನೀವು, ಅಕ್ರಮಕೂಟ ಸೇರಿಕೊಂಡು ಕಾನೂನುಬಾಹಿರ ಸಂಘಟನೆಯ ಸದ್ಯಸರಾಗಿ ಫಿರ್ಯಾದಿ ಮಲ್ಲನಗೌಡ ಹಾಗೂ ಚಾಸಾ-6 ಗಂಗನಗೌಡ ಮತ್ತು ಚಾಸಾ-7 ರುದ್ರಗೌಡ ಇವರ ಮೇಲೆ ಅಪರಾಧಿಕ ಹಲ್ಲೆ ಮಾಡಿ ದೊಂಬಿ ಎಬ್ಬಿಸುವ ಉದ್ದೇಶವಾಗಿದ್ದು, ಆ ಮೂಲಕ ಭಾರತ ದಂಡ ಸಂಹಿತೆ **ಕಲಂ 143 ಸಹಕಲಂ 149** ರಡಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವಿರಿ.

ಎರಡನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, 1 ರಿಂದ 13 ನೇ ಆರೋಪಿತರಾದ ನೀವೆಲ್ಲರೂ ಕಾನೂನು ಬಾಹಿರ ಸಂಘಟನೆಯ ಸದಸ್ಯರಾಗಿದ್ದು ನಿಮ್ಮ ಏಕೋದ್ದೇಶವನ್ನು ಈಡೇರಿಸುವ ಸಾಧನೆಗಾಗಿ ಪಿರ್ಯಾದಿ ಹಾಗೂ ಚಾಸಾಃ6-ಗಂಗನಗೌಡ, ಚಾಸಾಃ7-ರುದ್ರಗೌಡ ರವರುಗಳ ಮೇಲೆ ದೊಂಬಿ ಮಾಡುವ ಉದ್ದೇಶ ಹೊಂದಿದ್ದು, ಆ ಮೂಲಕ ಭಾರತ ದಂಡ ಸಂಹಿತೆ **ಕಲಂ 147 ಸಹಕಲಂ 149** ರಡಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವಿರಿ.

ಮೂರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, 1 ರಿಂದ 13 ನೇ ಆರೋಪಿತರಾದ ನೀವೆಲ್ಲರೂ ಕಾನೂನು ಬಾಹಿರ ಸಂಘಟನೆಯ ಸದಸ್ಯರಾಗಿದ್ದು ಅದರ ಏಕೋದ್ದೇಶವನ್ನು ಈಡೇರಿಸುವ ಸಾಧನೆಗಾಗಿ ಪಿರ್ಯಾದಿ-ಮಲ್ಲನಗೌಡ ಹಾಗೂ ಚಾಸಾಃ6-ಗಂಗನಗೌಡ, ಚಾಸಾಃ7-ರುದ್ರಗೌಡ ರವರುಗಳ ಮೇಲೆ ದೊಂಬಿ ಮಾಡುವ ಉದ್ದೇಶದಿಂದ ಮಚ್ಚು, ಸೋಡಾ ಬಾಟ್ಲಿ, ಬಡಿಗೆ ಹಾಗೂ ಕಲ್ಲುಗಳಂತಹ ಮಾರಾಕಾಸ್ತ್ರಗಳನ್ನು ಹೊಂದಿದ್ದು, ಆ

ಮೂಲಕ ಭಾರತ ದಂಡ ಸಂಹಿತೆ **ಕಲಂ 148 ಸಹಕಲಂ 149** ರಡಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವಿರಿ.

ನಾಲ್ಕನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, 1 ರಿಂದ 13 ನೇ ಆರೋಪಿತರಾದ ನೀವೆಲ್ಲರೂ ಕಾನೂನುಬಾಹಿರ ಸಂಘಟನೆಯ ಸದ್ಯಸರಾಗಿದ್ದು, ನಿಮ್ಮ ಏಕೋದ್ದೇಶದ ಉದ್ದೇಶ ಈಡೇರಿಕೆಗಾಗಿ ಫಿರ್ಯಾದಿ ಹಾಗೂ ಚಾಸಾಃ6-ಗಂಗನಗೌಡ, ಚಾಸಾಃ7-ರುದ್ರಗೌಡ ರವರ ಮೇಲೆ ಸ್ವ-ಇಚ್ಛೆಯಿಂದ ಹಲ್ಲೆ ಮಾಡಿ, ಕೈಯಿಂದ ಹೊಡಿ ಬಡಿ ಮಾಡಿ, ಸಾದಾ ಸ್ವರೂಪದ ಗಾಯವನ್ನು ಮಾಡಿದ್ದು, ಆ ಮೂಲಕ ಭಾರತ ದಂಡ ಸಂಹಿತೆ **ಕಲಂ 323 ಸಹಕಲಂ 149** ರಡಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವಿರಿ.

ಐದನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, 1 ರಿಂದ 13 ನೇ ಆರೋಪಿತರಾದ ನೀವೆಲ್ಲರೂ ಕಾನೂನುಬಾಹಿರ ಸಂಘಟನೆಯ ಸದ್ಯಸರಾಗಿದ್ದು ನಿಮ್ಮ ಏಕೊದ್ದೇಶ ಸಾಧನೆಗಾಗಿ, ಫಿರ್ಯಾದಿದಾರ ಮಲ್ಲನಗೌಡ ಪಾಟೀಲ ಹಾಗೂ ಚಾಸಾಃ6-ಗಂಗನಗೌಡ, ಚಾಸಾಃ7-ರುದ್ರಗೌಡ ರವರೊಂದಿಗೆ ತೆಕ್ಕೆ ಬಿದ್ದು, 1 ನೇ ಆರೋಪಿತರಾದ ನೀವು ಫಿರ್ಯಾದಿ ಮಲ್ಲನಗೌಡ ಇವರಿಗೆ ಮಚ್ಚಿನಿಂದ ತಲೆಗೆ ಕಡಿದು ರಕ್ತಗಾಯಪಡಿಸಿದ್ದಲ್ಲದೇ, ಮೋಟಾರ ಸೈಕಲ್ ನಂಬರ ಕೆಎ-26/ಆರ್-3832 ನೇದ್ದನ್ನು ಚಾಲು ಮಾಡಿ ಚಾಸಾಃ6-ಗಂಗನಗೌಡ ಇವರ ಮೇಲೆ ಮೋಟಾರ ಸೈಕಲ್ ಹಾಯಿಸಿ, ನೆಲಕ್ಕೆ ಕೆಡವಿ, ಅವರ ಹೊಟ್ಟೆಯ ಮೇಲೆ ಮೋಟಾರ ಸೈಕಲ್ ಹಾಯಿಸಿದ್ದು, 3 ನೇ ಆರೋಪಿತರಾದ ನೀವು ಸೋಡಾ ಬಾಟ್ಲಿಯಿಂದಾ ಚಾಸಾಃ7 ರುದ್ರಗೌಡ ರವರ ತಲೆಗೆ ಹೊಡೆದು, 3 ಮತ್ತು 4 ನೇ ಆರೋಪಿತರಾದ ನೀವು ಕೈಯಲ್ಲಿದ್ದ ಬಡಿಗೆಯಿಂದ ಫಿರ್ಯಾದಿ ಮಲ್ಲನಗೌಡನಿಗೆ ಹಾಗೂ ಚಾಸಾಃ6 ಗಂಗನಗೌಡ ಹಾಗೂ ಚಾಸಾ-7 ರುದ್ರಗಡ ಇವರಿಗೆ ಸಿಕ್ಕಸಿಕ್ಕಲ್ಲಿ ಹೊಡಿಬಡಿ ಮಾಡಿ, 7 ನೇ ಆರೋಪಿತರಾದ ನೀವು ಚಾಸಾಃ7 ರುದ್ರಗೌಡ ಇವರಿಗೆ ಕಲ್ಲಿನಿಂದಾ ಹೊಡೆದಿದ್ದು, 13 ನೇ ಆರೋಪಿತರಾದ ನೀವು ಚಾಸಾಃ6 ಗಂಗನಗೌಡ ರವರಿಗೆ ಕಲ್ಲಿನಿಂದ ಹೊಡೆದಿದ್ದು, ಮಚ್ಚು, ಬಾಟಲಿಯಂತಹ ಅಪಾಯಕಾರಿ ಆಯುಧಗಳಿಂದ ಸ್ವಃಇಚ್ಛೆಯಿಂದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾರತ ದಂಡ ಸಂಹಿತೆ **ಕಲಂ 324 ಸಹಕಲಂ 149** ರಡಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವಿರಿ.

ಆರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, 1 ರಿಂದ 13 ನೇ ಆರೋಪಿತರಾದ ನೀವೆಲ್ಲರೂ ಕಾನೂನುಬಾಹಿರ ಸಂಘಟನೆಯ ಸದ್ಯಸರಾಗಿ ನೀವು, ಮಚ್ಚಿನಿಂದ, ಬಾಟಲಿಯಿಂದ, ಬಡಿಗೆಯಿಂದ ಮತ್ತು ಕಲ್ಲಿನಿಂದ ಫಿರ್ಯಾದಿಗೆ ಹಾಗೂ ಚಾಸಾಃ6 ಮತ್ತು 7 ರವರಿಗೆ ಹೊಡೆದರೆ, ಸದರಿ ಕೃತ್ಯದಿಂದ ಮರಣ ಉಂಟು ಮಾಡಿದರೆ ಕೊಲೆಯಾಗಬಹುದು ಎಂಬ ತಿಳುವಳಿಕೆ ಇದ್ದರೂ ಕೂಡಾ, 1 ನೇ ಆರೋಪಿತರಾದ ನೀವು ಫಿರ್ಯಾದಿಗೆ ಮಚ್ಚಿನಿಂದ ತಲೆಗೆ ಕಡಿದು ರಕ್ತಗಾಯಪಡಿಸಿದ್ದಲ್ಲದೇ, ಮೋಟಾರ ಸೈಕಲ್ ನಂಬರ ಕೆಎ 26 ಆರ್ 3832 ನೇದ್ದನ್ನು ಚಾಲು ಮಾಡಿ, ಚಾಸಾಃ6-ಗಂಗನಗೌಡ ಇವರ ಮೇಲೆ ಮೋಟಾರ ಸೈಕಲ್ ಹಾಯಿಸಿ, ನೆಲಕ್ಕೆ ಕೆಡವಿ, ಅವರ ಹೊಟ್ಟೆಯ ಮೇಲೆ ಮೋಟಾರ ಸೈಕಲ್ ಹಾಯಿಸಿದ್ದು, 3 ನೇ ಆರೋಪಿ-ಸಿದ್ದು ಇತನು ಸೋಡಾ ಬಾಟ್ಲಿಯಿಂದಾ ಚಾಸಾಃ7 ರವರ ತಲೆಗೆ ಹೊಡೆದು, 3 ನೇ ಆರೋಪಿ ಹಾಗೂ 4 ನೇ ಆರೋಪಿ-ಬಸವರಾಜ ರವರು ಕೈಯಲ್ಲಿದ್ದ ಬಡಿಗೆಯಿಂದ ಫಿರ್ಯಾದಿಗೆ ಹಾಗೂ ಚಾಸಾಃ6 ಹಾಗೂ 7 ರವರಿಗೆ ಸಿಕ್ಕಸಿಕ್ಕಲ್ಲಿ ಹೊಬಡಿ ಮಾಡಿ, ಸದರಿ ಬಡಿಗೆಯಿಂದ 7 ನೇ ಆರೋಪಿ-ಸಹದೇವಗೌಡ ಇವನು ಚಾಸಾಃ7 ರವರಿಗೆ ಕಲ್ಲಿನಿಂದಾ ಹೊಡೆದಿದ್ದು, 13 ನೇ ಆರೋಪಿ-ಲಲಿತವ್ವ ಇವಳು ಚಾಸಾಃ6 ರವರಿಗೆ ಕಲ್ಲಿನಿಂದ ಹೊಡೆದು, ಕೊಲೆ ಮಾಡಲು ಪ್ರಯತ್ನಿಸಿದ್ದು, ಆ ಮೂಲಕ ಭಾರತ ದಂಡ ಸಂಹಿತೆ **ಕಲಂ 307 ಸಹಕಲಂ 149** ರಡಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವಿರಿ.

ಏಳನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, 1 ರಿಂದ 13 ನೇ ಆರೋಪಿತರಾದ ನೀವೆಲ್ಲರೂ ಕಾನೂನುಬಾಹಿರ ಸಂಘಟನೆಯ ಸದ್ಯಸರಾಗಿ ಅದರ ಉದ್ದೇಶ ಈಡೇರಿಕೆಗಾಗಿ, ಫಿರ್ಯಾದಿ ಮಲ್ಲನಗೌಡನಿಗೆ ಹಾಗೂ ಚಾಸಾಃ6 ಗಂಗನಗೌಡ ಹಾಗೂ ಚಾಸಾಃ7 ರುದ್ರಗೌಡ ಇವರಿಗೆ "ಲೇ ಬೋಸುಡಿ ಮಕ್ಕಳ, ನಮ್ಮ ಮೇಲೆ ಕೇಸು ಮಾಡ್ತೀರಾ ಸೂಳೆ ಮಕ್ಕಳ" ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿ, ಶಾಂತಿ ಭಂಗವನ್ನು ಮಾಡಲು ಉದ್ರೇಕಿಸುವುದಕ್ಕಾಗಿ ಉದ್ದೇಶಪೂರ್ವಕ ಅವಮಾನಪಡಿಸಿ, ಸಾರ್ವಜನಿಕ ಶಾಂತತಾ ಭಂಗಗೊಳಿಸಿದ್ದು, ಆ ಮೂಲಕ ಭಾರತ ದಂಡ ಸಂಹಿತೆ **ಕಲಂ 504 ಸಹಕಲಂ 149** ರಡಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿ ನಂ.1

ರಿಂದ 13 ನೇದವರಾದ ನೀವೆಲ್ಲರೂ ಕಾನೂನುಬಾಹಿರ ಸಂಘಟನೆಯ ಸದ್ಯಸರಾಗಿ ಅದರ ಉದ್ದೇಶ ಸಾಧನೆಗಾಗಿ ಸೇರಿ, ಫಿರ್ಯಾದಿ-ಮಲ್ಲನಗೌಡ ಹಾಗೂ ಚಾಸಾಃ6-ಗಂಗನಗೌಡ, ಚಾಸಾಃ7-ರುದ್ರಗೌಡ, ಚಾಸಾಃ8-ಹನಮಂತಗೌಡ ರವರೊಂದಿಗೆ ತಂಟೆ ತೆಗೆದಾಗ, ಚಾಸಾ-8 ಹನಮಂತಗೌಡ ಪಾಟೀಲ, ಚಾಸಾ-12 ರತ್ನಾ ಪಾಟೀಲ, ಚಾಸಾ-13 ಬಸವರಾಜ ಕೋಟಿ, ಚಾಸಾ-14 ಬಸವರಾಜ ಬೆಟಗೇರಿ, ಚಾಸಾ-15 ರಮೇಶ ಕುಸ್ಲಾಪೂರ, ಚಾಸಾ-16 ಚನ್ನಪ್ಪ ಕುಸ್ಲಾಪೂರ ರವರುಗಳು ಬಂದು ತಂಟೆಯನ್ನು ಬಿಡಿಸಿದ್ದು, ಆಗ ಆರೋಪಿತರಾದ ನೀವೆಲ್ಲರೂ "ಇವತ್ತು ಜನರು ಬಂದರು ಅಂತಾ ಉಳಿದುಕೊಂಡಿರಿ, ಇನ್ನೊಮ್ಮೆ ಸಿಕ್ಕರೆ ನಿಮ್ಮನ್ನು ಜೀವ ಸಹಿತಾ ಬಿಡುವುದಿಲ್ಲ" ಎಂದು ಅಪಾಯ ಭೀತಿ ಹುಟ್ಟಿಸುವ ಉದ್ದೇಶದಿಂದ ಬೆದರಿಕೆ ಹಾಕಿ, ಅಪರಾಧಿಕ ಭಯೋತ್ಪಾದನೆಯನ್ನು ಉಂಟು ಮಾಡಿ, ಆ ಮೂಲಕ ಭಾರತ ದಂಡ ಸಂಹಿತೆ **ಕಲಂ 506 ಸಹಕಲಂ 149** ರಡಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವಿರಿ.

**(ಈ ಆಪಾದನೆಯನ್ನು ದಿನಾಂಕಃ 24.04.2023 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಅವರಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ಹೇಳಲಾಯಿತು.)**

ಸಹಿ - 24.04.2023

**(ಬಸವರಾಜ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**